**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-1**

ಸಂಖ್ಯೆ: ಸಿ1(2).ಸ್ಥಾನಪನ್ನ.ಬಡ್ತಿ/07/2017-18 ದಿನಾಂಕ: 05-11-2018

**ಅಧಿಕೃತ ಜ್ಞಾಪನ**

**ವಿಷಯ:** ಸರ್ಕಾರಿ ಪ್ರೌಢಶಾಲಾ ಸಹಶಿಕ್ಷಕರ ವೃಂದದಿಂದ ಮುಖ್ಯ ಶಿಕ್ಷಕರ ವೃಂದದ ಬಡ್ತಿ ಪ್ರಕ್ರಿಯೆಯನ್ನು ರದ್ದುಪಡಿಸುವ ಬಗ್ಗೆ.

**ಉಲ್ಲೇಖ:**1 ಈ ಕಛೇರಿ ಸಮ ಪತ್ರ ದಿನಾಂಕ: 26-02-2018, ದಿನಾಂಕ: 23-04-2018. ಮತ್ತು ದಿನಾಂಕ: 30-06-2018.

2.ಡಿ.ಪಿ.ಎ.ಆರ್ ಸುತ್ತೋಲೆ ಸಂಖ್ಯೆ: ಸಿಆಸು 380 ಸೇನೆನಿ 2018 (ಭಾಗ-1), ದಿನಾಂಕ: 03-08-2018.

*****

**ಪ್ರಸ್ತಾವನೆ:**

ಸರ್ಕಾರಿ ಪ್ರೌಢಶಾಲಾ ಸಹಶಿಕ್ಷಕರ ವೃಂದದಿಂದ ಮುಖ್ಯ ಶಿಕ್ಷಕರ ವೃಂದಕ್ಕೆ ಬಡ್ತಿ ನೀಡುವ ಸಂಬಂಧ ದಿನಾಂಕ:: 16.04.2018 ಹಾಗೂ 19.05.2018 ಡಿ.ಪಿ.ಸಿ ಸಭೆಯನ್ನು ನಡೆಸಿ ನಡವಳಿಯನ್ನು ತಯಾರಿಸಿ ಅನುಮೋದಿಸಲಾಗಿತ್ತು ಹಾಗೂ ದಿನಾಂಕ 30.06.2018 ರಂದು ಈ ಕಾರ್ಯಾಲಯದಿಂದ ಕೌನ್ಸಿಲಿಂಗ್ ಸಲುವಾಗಿ ಆದೇಶ ಹೊರಡಿಸಲಾಗಿತ್ತು. ಹಾಗೂ ಕೌನ್ಸಿಲಿಂಗ್‌ಅನ್ನು ಅನಿವಾರ್ಯವಾಗಿ ಕಾರಣಾಂತರಗಳಿಂದ ಮುಂದೂಡಲಾಗಿತ್ತು. ತದನಂತರ ಜೇಷ್ಠತಾಪಟ್ಟಿಯಲ್ಲಿನ ಲೋಪಗಳ ಬಗ್ಗೆ ಹಲವಾರು ಪ್ರೌಢಶಾಲಾ ಶಿಕ್ಷಕರು ಹಾಗೂ ಶಿಕ್ಷಕರ ಸಂಘದವರು ಆಕ್ಷೇಪಣೆ ಸಲ್ಲಿಸಿದ ಹಿನ್ನಲೆಯಲ್ಲಿ ಇವೆಲ್ಲವನ್ನು ಪರಿಶೀಲಿಸಿ ನಿರ್ದೇಶಕರು (ಪ್ರೌಢಶಿಕ್ಷಣ) ಇವರು ಪರಿಷ್ಕೃತ ಸಹ ಶಿಕ್ಷಕರ ಜೇಷ್ಠತಾ ಪಟ್ಟಿಯನ್ನು ಉಪನಿರ್ದೇಶಕರಿಂದ ದೃಢೀಕರಿಸಿ ಅಂತಿಮಗೊಳಿಸಿ ಸಲ್ಲಿಸಿರುತ್ತಾರೆ.

ಸರ್ಕಾರದ ಡಿ.ಪಿ.ಎ.ಆರ್ ಸುತ್ತೋಲೆ ಸಂಖ್ಯೆ: ಸಿಆಸು 380 ಸೇನೆನಿ 2018 (ಭಾಗ-1), ದಿನಾಂಕ: 03-08-2018ರಲ್ಲಿ ಪವಿತ್ರ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ಮುಂದಿನ ಆದೇಶ ನೀಡುವವರೆಗೂ ಯಾವುದೇ ಬಡ್ತಿ ಪ್ರಕ್ರಿಯೆಗಳನ್ನು ಕೈಗೊಳ್ಳದೆ ಯಥಾಸ್ಥಿತಿ ಮುಂದುವರೆಸಬೇಕೆಂದು ನಿರ್ದೇಶಿಸಲಾಗಿದೆ. ಅದರಂತೆ ಬಡ್ತಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಿ ಈ ಮೇಲ್ಕಂಡ ಅಂಶಗಳ ಆಧಾರದಂತೆ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ:**

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ದಿನಾಂಕ: 16-04-2018 ಹಾಗೂ 019-05-2018ರದು ಜರುಗಿದ ಇಲಾಖಾ ಮುಂಬಡ್ತಿ (ಡಿಪಿಸಿ) ಸಭೆಯ ನಡವಳಿಗಳನ್ನು ಹಾಗೂ ಮುಖ್ಯ ಶಿಕ್ಷಕರ ಬಡ್ತಿ ಕೌನ್ಸಿಲಿಂಗ್ ಪ್ರಕಿಯೆಗೆ ನೀಡಿದ್ದ ದಿನಾಂಕ: 30-06-2018ರ ಆದೇಶವನ್ನು ರದ್ದುಪಡಿಸಿ ಆದೇಶಿಸಿದೆ.

(ಡಾ|| ಪಿ.ಸಿ ಜಾಫರ್)
ಆಯುಕ್ತರು

ಪ್ರತಿಯನ್ನು:

1. ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ), ಬೆಂಗಳೂರು ಮತ್ತು ಮೈಸೂರು ವಿಭಾಗದ ಜಿಲ್ಲೆಗಳು.
2. ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಪದನಿಮಿತ್ತ ಪ್ರಾಂಶುಪಾಲರು, ಬೆಂಗಳೂರು ಮತ್ತು ಮೈಸೂರು ವಿಭಾಗದ ಜಿಲ್ಲಾ ಶಿಕ್ಷಣ ಮತು ತರಬೇತಿ ಸಂಸ್ಥೆಗಳು.